52

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಗೋವಿಂದರಾಜು ಇವರು ದಿನಾಂಕ: 18.12.2024 ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ಪ್ರಸ್ತಾಪಿತ ವಿಷಯ:**

ಶಾಲಾ ಮಕ್ಕಳ ಆಟೋರಿಕ್ಷಾಗಳಲ್ಲಿ ಮಿತಿ ಮೀರಿ ಶಾಲಾ ಮಕ್ಕಳು, ಅಸಂಘಟಿತ ಕಾರ್ಮಿಕರನ್ನು ಕರೆದೊಯ್ಯಬಾರದು ಎಂದು ಸುಪ್ರೀಂಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದ್ದರೂ ಕೋಲಾರ ಜಿಲ್ಲೆಯ ಕೆಜಿಎಫ್ ಮತ್ತು ಸುತ್ತಮುತ್ತಲಿನ ಹಲವು ಶಾಲೆಗಳ ಮಕ್ಕಳನ್ನು ಕುರಿಗಳಂತೆ ಆಟೋಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ತುಂಬಿಕೊಂಡು ಸಾಗಿಸುತ್ತಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಶಾಲಾ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಸುಪ್ರೀಂಕೋರ್ಟ್ ಸೂಚನೆ ಮೇರೆಗೆ ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಜಂಟಿಯಾಗಿ ಮಾರ್ಗಸೂಚಿಯನ್ನು ರೂಪಿಸಿವೆ. ಅದನ್ನು ಗಣನೆಗೆ ತೆಗೆದುಕೊಳ್ಳದೆ ವಾಹನ ಮಾಲೀಕರು ಮತ್ತು ಆಟೋ ಮಾಲೀಕರು ಹಾಗೂ ಕೆಲವು ಪೋಷಕರು ಕೇವಲ ಹಣದ ಆಸೆಗೆ ಹೆಚ್ಚಿನ ಮಕ್ಕಳನ್ನು ತುಂಬಿಕೊಂಡು ಹೋಗುತ್ತಿರುವುದರಿಂದ ಆಗ್ಗಿಂದ್ದಾಗೆ ಅಪಘಾತಗಳು ಸಂಭವಿಸಿ ಅಮಾಯಕ ಮಕ್ಕಳು ಪ್ರಪಂಚವನ್ನು ನೋಡುವ ಮುನ್ನವೇ ತಮ್ಮದಲ್ಲದ ತಪ್ಪಿಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ವಾಹನ ಸೀಟ್ ಸಾಮರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ವಾಹನಗಳಲ್ಲಿ ಕೂರಿಸುವಂತಿಲ್ಲ. ಚಾಲಕನ ಪರವಾನಗಿ, ವಾಹನ ಸುಸ್ಥಿತಿಯಲ್ಲಿದೆ ಎಂಬುದನ್ನು ಪರಿಶೀಲಿಸಬೇಕು. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಸುರಕ್ಷತೆಗಾಗಿ ಅಟೆಂಡರ್ ಇರುವುದು ಸೂಕ್ತ. ಚಾಲಕ ತನ್ನ ಸೀಟಿನ ಪಕ್ಕದಲ್ಲಿ ಮಕ್ಕಳನ್ನು ಕೂರಿಸಿಕೊಳ್ಳಬಾರದು. ಶಾಲಾ ಮಕ್ಕಳನ್ನು ಕರೆದೊಯ್ಯುವ ಬಸ್ಸುಗಳಿಗೆ ಸಿಸಿ ಟಿವಿ ಅಳವಡಿಸಿರಬೇಕು. ಶಾಲಾ ಮಕ್ಕಳನ್ನು ಸಾಗಿಸುವ ವಾಹನದ ಮೇಲೆ ಶಾಲಾ ವಾಹನ ಎಂದು ಬರೆಸಿರಬೇಕು, ಯಾವುದೇ ರೀತಿಯ ತುರ್ತು ಸಂದರ್ಭಗಳಲ್ಲಿ ಚಾಲಕನನ್ನು ಸಂಪರ್ಕಿಸಲು ಚಾಲಕನ ಮೊಬೈಲ್ ಸಂಖ್ಯೆಯನ್ನು ವಾಹನದ ಮೇಲೆ ಕಡ್ಡಾಯವಾಗಿ ನಮೂದಿಸಿರಬೇಕು. ಇದರೊಂದಿಗೆ ರಾಜ್ಯ ಸರ್ಕಾರ ಹೊರಡಿಸಿರುವ ನೂತನ ಕಾಯಿದೆಯಲ್ಲಿ ಶಾಲಾ ಮಕ್ಕಳನ್ನು ಅನ್ಯರಾಜ್ಯಗಳ ನೋಂದಣಿ ಇರುವ ವಾಹನಗಳಲ್ಲಿ ಕರೆದೊಯ್ಯುವಂತಿಲ್ಲ, ಒಂದು ವೇಳೆ ಅನ್ಯ ರಾಜ್ಯದ ವಾಹನಗಳಲ್ಲಿ ಮಕ್ಕಳನ್ನು ಸಾಗಾಟ ಮಾಡುತ್ತಿರುವುದು ಕಂಡು ಬಂದಲ್ಲಿ ಅಂತಹ ವಾಹನಗಳನ್ನು ಸೀಜ್ ಮಾಡುವಂತೆ ಸರ್ಕಾರ ಆದೇಶ ಹೊರಡಿಸಿರುವುದು ಸರಿಯಷ್ಟೆ, ಆದರೆ ಈ ಎಲ್ಲಾ ನೀತಿನಿಯಮಗಳನ್ನು ಯಾರು ಪಾಲಿಸದಿರುವುದರಿಂದ, ಮಕ್ಕಳ ಹಿತದೃಷ್ಟಿಯಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ತಮ್ಮನ್ನು ಕೋರುತ್ತೇನೆ.

**ಉತ್ತರ :**

ಮಾನ್ಯ ಸರ್ವೋಚ್ಛ ನ್ಯಾಯಾಲಯವು WP(Civil) No.13029/1985ರಲ್ಲಿ ದಿನಾಂಕ: 20-11-1997 ಮತ್ತು 16-12-1997 ರಂದು ನೀಡಿರುವ ಆದೇಶದನುಸಾರ, ಶಾಲಾಮಕ್ಕಳನ್ನು ಕೊಂಡೊಯ್ಯುವಾಗ ಈ ಕೆಳಕಂಡ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ :-

- "School Bus" must be prominently written on the back and front of every Bus carrying school children.
- If it is a hired Bus, "On School Duty" should be prominently displayed.
- No Bus belonging to an Educational Institution should carry children in excess of its permitted seating capacity.
- Bus must have a First Aid Box.
- Windows of the Bus must be fitted with horizontal grills.
- There must be a fire extinguisher in every Bus.
- School name and telephone number must be written on the Bus.
- Doors of the Bus should be fitted with reliable locks.

- Every driver of a school bus must have a minimum of 5 years of experience of driving heavy vehicles, and must not have any previous record of traffic offenses.
- To keep school bags safely, there should be space provided under the seat.
- There should be an escort from the School in the Bus, preferably a teacher to ensure safety norms.

ಆದ್ದರಿಂದ, ಮೇಲ್ಕಂಡಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಎಲ್ಲಾ ಶಾಲೆಗಳು, ಶಿಕ್ಷಣ ಸಂಸ್ಥೆಗಳು ಸ್ವಂತ ಮಾಲೀಕತ್ವದಲ್ಲಿ ಹೊಂದಿರುವ ಶಾಲಾ ವಾಹನಗಳಲ್ಲಿ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸಲು ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ.

ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ಕ್ಕೆ ಸರ್ಕಾರದ ಅಧಿಸೂಚನೆ ಸಂ.ಸಾರಿಇ 01 ಸಾಇಪ 2011, ದಿನಾಂಕ: 18-01-2013 ರಲ್ಲಿ ತಿದ್ದುಪಡಿ ತಂದು conditions for vehicles engaged in transport of school children Rules 2012ನ್ನು ಜಾರಿಗೊಳಿಸಲಾಗಿದೆ. ಅದರಂತೆ, ಖಾಸಗಿ ಒಪ್ಪಂದ ವಾಹನಗಳನ್ನು ಶಾಲಾ ವಾಹನಗಳನ್ನಾಗಿ ಆಚರಣೆ ಮಾಡಬೇಕಾದಲ್ಲಿ ಅಂತಹ ವಾಹನಗಳು ಪಾಲಿಸಬೇಕಾದ ನಿಬಂಧನೆಗಳ ಕುರಿತು ನಿಯಮಗಳು ದಿನಾಂಕ:01-05-2013ರಿಂದ ಜಾರಿಗೆ ಬಂದಿರುತ್ತವೆ. ಅದರಂತೆ, ಖಾಸಗಿ ಪ್ರವರ್ತಕರು ಕರಾರಿನ ಮೇರೆಗೆ ಶಾಲಾ ಮಕ್ಕಳಿಗೆ ಸಾರಿಗೆ ಸೌಲಭ್ಯ ಒದಗಿಸಲು ವಾಹನಗಳಲ್ಲಿ ಈ ಕೆಳಕಂಡ ನಿಬಂಧನೆಗಳನ್ನು ಪಾಲಿಸಬೇಕಾಗುತ್ತದೆ.

1. ಮೋಟಾರು ವಾಹನ ಕಾಯ್ದೆ 1988ರ ಕಲಂ 74ರ ಪ್ರಕಾರ ಒಪ್ಪಂದ ವಾಹನ ರಹದಾರಿ ಹೊಂದಿರಬೇಕು.

2. ವಾಹನದ ಆಸನ ಸಾಮರ್ಥ್ಯ 12+1 ಗೆ ಮೀರದಂತೆ ಇರಬೇಕು. ನಿಗದಿತ ಆಸನ ಸಾಮರ್ಥ್ಯವನ್ನು ಬದಲಾವಣೆ ಮಾಡಿರಬಾರದು.
3. ಅನುಮೋದಿತ ಸ್ಪೀಡ್ ಗೌರ್ವರ್ ಅಳವಡಿಸಿದ್ದು ವೇಗಮಿತಿ 40 kmph ಗೆ ನಿಯಂತ್ರಿತವಾಗು ವಂತಿರಬೇಕು.
4. ವಾಹನವು ನೋಂದಣಿ ದಿನಾಂಕದಿಂದ 15 ವರ್ಷ ಮೀರಿರಬಾರದು.
5. ವಾಹನಕ್ಕೆ ಹೆದ್ದಾರಿ ಹಳದಿ ಬಣ್ಣ (Highway yellow colour) ಬಳಿದಿದ್ದು ವಾಹನದ ಹೊರ ಕವಚದ ಮಧ್ಯದಲ್ಲಿ 150 mm ಅಳತೆಯ ಹಸಿರು ಬಣ್ಣದ ಪಟ್ಟಿಯನ್ನು ಹಾಕಿ ಅದರಲ್ಲಿ ವಾಹನದ ಹೊರ ಭಾಗದ ನಾಲ್ಕು ಭಾಗಗಳಲ್ಲಿ ಶಾಲಾ ವಾಹನ ಎಂದು ಬರೆಸಿರಬೇಕು.
6. ವಾಹನಕ್ಕೆ ಎಲ್.ಪಿ.ಜಿ. ಇಂಧನ ಕಿಟ್ ಅಳವಡಿಸಿದಲ್ಲಿ, ಅನುಮೋದಿತ ಕಿಟ್ ಸರಬರಾಜು ದಾರರಿಂದ ಅಳವಡಿಸಿರಬೇಕು ಹಾಗೂ ನೋಂದಣಿ ಪ್ರಾಧಿಕಾರದಿಂದ ಪ್ರಮಾಣೀಕರಿಸಿರ ಬೇಕು ಮತ್ತು ಎಲ್.ಪಿ.ಜಿ. ಕಿಟ್‌ಗಳ ಮೇಲೆ ಯಾವುದೇ ಆಸನಗಳನ್ನು ಅಳವಡಿಸಬಾರದು.
7. ಟಿಂಟೆಡ್ ಗ್ಲಾಸ್ ಹೊಂದಿರಬಾರದು.
8. ವಾಹನದ ಬಾಗಿಲುಗಳಿಗೆ ಸುರಕ್ಷಿತ ಲಾಕಿಂಗ್ ವ್ಯವಸ್ಥೆ ಹೊಂದಿರಬೇಕು.
9. ಚಾಲಕರು LMV ಸಾರಿಗೆ ವಾಹನ ಚಾಲನೆ ಮಾಡಲು ಲೈಸೆನ್ಸ್ ಹೊಂದಿದ್ದು ಕನಿಷ್ಟ ನಾಲ್ಕು ವರ್ಷದ ಅನುಭವ ಹೊಂದಿರಬೇಕು.
10. ವಾಹನದ ಒಳ ಬಾಗಿಲಲ್ಲಿ ಸ್ಕೂಲ್ ಬ್ಯಾಗ್ ಇಡಲು ಸ್ಥಳಾವಕಾಶವಿರಬೇಕು.
11. ರಹದಾರಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ ಇತ್ಯಾದಿ ವಿವರಗಳನ್ನು ವಾಹನದ ಹೊರ ಭಾಗದಲ್ಲಿ ಬರೆಸಿರಬೇಕು ಅಥವಾ ವಿವರಗಳ ಪಟ್ಟಿಯನ್ನು ಅಳವಡಿಸಿರಬೇಕು.
12. ವಾಹನಗಳಲ್ಲಿ ಕರೆದೊಯ್ಯುವ ಮಕ್ಕಳ ಹೆಸರು, ತರಗತಿ ಮತ್ತು ಮನೆಯ ವಿಳಾಸ, ದೂರವಾಣಿ ಸಂಖ್ಯೆ/ ಮೊಬೈಲ್ ಸಂಖ್ಯೆ, ರಕ್ತದ ಗುಂಪು, ಮಾರ್ಗದ ವಿವರ ಇತ್ಯಾದಿ ಪಟ್ಟಿಯನ್ನು ವಾಹನದಲ್ಲಿ ಇಟ್ಟಿರಬೇಕು.
13. ಶಾಲಾ ವಾಹನವಾಗಿ ಉಪಯೋಗಿಸುವ ವಾಹನವು ಗಟ್ಟಿಮುಟ್ಟಾದ ಮೇಲ್ಛಾವಣಿ ಹೊಂದಿದ್ದು ಮುಚ್ಚಿದ ಕವಚ (closed body) ಹೊಂದಿರಬೇಕು.
14. School Cab Safety Committee ಯನ್ನು ಪ್ರತಿ ಶಾಲೆಯಲ್ಲಿ ರಚಿಸಬೇಕು.

ಹಲವಾರು ಶಾಲಾ ವಾಹನಗಳಲ್ಲಿ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲವೆಂದು ಕಂಡುಬಂದಿರುವುದರಿಂದ ಪ್ರತಿಯೊಂದು ಶಾಲೆಗಳು, ಶಿಕ್ಷಣ ಸಂಸ್ಥೆಗಳು ಅವರದೇ ಮಾಲೀಕತ್ವದಲ್ಲಿ ಸ್ವಂತವಾಗಿ ಹೊಂದಿರುವ ಶಾಲಾ ವಾಹನಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಮೇರೆಗೆ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು ಹಾಗೂ ಖಾಸಗಿ ಪ್ರವರ್ತಕರ ಒಪ್ಪಂದ ವಾಹನಗಳು ಶಾಲಾ ವಾಹನಗಳಾಗಿ ಆಚರಣೆ ಮಾಡಲು ಸರ್ಕಾರದ ಅಧಿಸೂಚನೆ ಸಂ. ಸಾರಿಇ 01 ಸಾಇಪ 2011, ದಿನಾಂಕ:18-01-2013ರಲ್ಲಿ ನಿಗದಿಪಡಿಸಿರುವ ಸ್ಕೂಲ್ ಕ್ಯಾಬ್ ಸ್ಕೀಮ್ 2012ರ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ. ಈ ರೀತಿಯ ಸ್ಕೂಲ್ ಕ್ಯಾಬ್‌ಗಳಿಗೆ ಸರ್ಕಾರವು ತೆರಿಗೆಯಲ್ಲಿ ಶೇಕಡಾ 50ರಷ್ಟು ವಿನಾಯಿತಿಯನ್ನು ನೀಡಿರುತ್ತದೆ.

ಸಾರಿಗೆ ಇಲಾಖೆಯ ವತಿಯಿಂದ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಪ್ರವರ್ತನ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ಆಚರಣೆ ಮಾಡುತ್ತಿದ್ದ ಆಟೋರಿಕ್ಷಾಗಳು ಸೇರಿದಂತೆ ಶಾಲಾ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಗುತ್ತಿದೆ. ಕಳೆದ 03 ವರ್ಷಗಳಲ್ಲಿ ಕೈಗೊಂಡ ತಪಾಸಣಾ ಕಾರ್ಯದ ವಿವರಗಳು ಕೆಳಕಂಡಂತಿವೆ :-

| ವಾಹನಗಳ ವರ್ಗ | ತಪಾಸಿಸಿದ ವಾಹನಗಳು | ದಾಖಲಿಸಿದ ಪ್ರಕರಣಗಳು | ವಶಪಡಿಸಿಕೊಂಡ ವಾಹನಗಳು | ವಸೂಲಿಸಿದ ತೆರಿಗೆ/ ದಂಡದ ಮೊತ್ತ (ರೂ.ಗಳಲ್ಲಿ) |
|---|---|---|---|---|
| ಎಲ್ಲಾ ವರ್ಗದ ಶಾಲಾ ವಾಹನಗಳು ಮತ್ತು ಆಟೋ ರಿಕ್ಷಾಗಳು | 432 | 253 | 02 | 11,49,800 |

ಸಾರಿಗೆ ಇಲಾಖೆಯ ವತಿಯಿಂದ ರಾಜ್ಯಾದ್ಯಂತ ಪ್ರವರ್ತನ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಮೋಟಾರು ವಾಹನ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ ಆಚರಣೆ ಮಾಡುತ್ತಿದ್ದ ಆಟೋರಿಕ್ಷಾಗಳು ಸೇರಿದಂತೆ ಶಾಲಾ ವಾಹನಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ದಂಡ ವಿಧಿಸಲಾಗುತ್ತಿದೆ. ಏಪ್ರಿಲ್ 2024ರ ಮಾಹೆಯಿಂದ ಅಕ್ಟೋಬರ್ 2024ರ ಮಾಹೆಯವರೆಗೆ ಕೈಗೊಂಡ ತಪಾಸಣಾ ಕಾರ್ಯದ ವಿವರಗಳು ಈ ಕೆಳಕಂಡಂತಿವೆ;

| ವಾಹನಗಳ ವರ್ಗ | ತಪಾಸಿಸಿದ ವಾಹನಗಳು | ದಾಖಲಿಸಿದ ಪ್ರಕರಣಗಳು | ವಶಪಡಿಸಿದ ವಾಹನಗಳು | ವಸೂಲಿಸಿದ ತೆರಿಗೆ/ ದಂಡದ ಮೊತ್ತ (ರೂ.ಗಳಲ್ಲಿ) |
|---|---|---|---|---|
| ಎಲ್ಲಾ ವರ್ಗದ ಶಾಲಾ ವಾಹನಗಳು | 16,823 | 1,248 | 72 | 1,17,43,173 |
| ಆಟೋರಿಕ್ಷಾಗಳು | 54,727 | 10,941 | 299 | 3,17,96,454 |
| **ಒಟ್ಟು** | **71,550** | **12,189** | **371** | **4,35,39,627** |

ಪ್ರವರ್ತನ ಕಾರ್ಯವು ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಯಾಗಿದ್ದು, ಆಟೋರಿಕ್ಷಾಗಳು ಸೇರಿದಂತೆ ಶಾಲಾ ವಾಹನಗಳು ಚಾಲ್ತಿಯಲ್ಲಿರುವ ನಿಯಮಗಳನ್ನು ಪಾಲಿಸುವಂತೆ ಎಚ್ಚರಿಕೆ ವಹಿಸಲಾಗುತ್ತಿದ್ದು, ನಿಯಮ ಪಾಲನೆ ಮಾಡದಿರುವ ವಾಹನ ಹಾಗೂ ಚಾಲಕರ ವಿರುದ್ಧ ರಾಜ್ಯಾದ್ಯಂತ ಸೂಕ್ತ ಕ್ರಮವಹಿಸಲಾಗುತ್ತಿದೆ.

ಟಿಡಿ 81 ಟಿಡಿಕ್ಯೂ 2024

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಮುಜರಾಯಿ ಸಚಿವರು**